

# ಅಂತರಂಗದ ಮಾತಿಗಷ್ಟೇ ಓಗೊಡುವೆ...

ಹಿಂದೂಸ್ತಾನಿ ಗಾಯಕ ಭರತ್ ಬಳುವಳ್ಳಿ ಮೂಲತಃ ಹೊನ್ನಾವರದವರು, ಸದ್ಯಕ್ಕೆ ಮುಂಬೈ ನಿವಾಸಿ. ಕಿರಿಯ ವಯಸ್ಸಿನಲ್ಲಿಯೇ ಅಪಾರ ಜನಮನ್ನಣೆಯನ್ನು ಪಡೆದ ಅವರ ಅಭಂಗ್‌ಗಳಿಗೆ ಕೇಳುಗರ ದೊಡ್ಡ ಸಮೂಹವೇ ಇದೆ. 'ಸ್ವರಾಧೀಶ' ಬಿರುದಿನ ಈ ಸಂಗೀತ ತಾರೆ, 'ಸುಧಾ'ಕ್ಕೆ ನೀಡಿದ ವಿಶೇಷ ಸಂದರ್ಶನದಲ್ಲಿ ತಮ್ಮ ಸಾಧನೆಯ ಹಾದಿ ಹಾಗೂ ಸಂಗೀತ ಪರಂಪರೆ ಕುರಿತು ಮಾತನಾಡಿದ್ದಾರೆ.

■ ಸಂದರ್ಶನ: **ಕೋಡಿಬೆಟ್ಟು ರಾಜಲಕ್ಷ್ಮಿ**
ಫೋಟೊ: ಫಕ್ರುದ್ದೀನ್ ಎಚ್.

**◆ ದೀನನಾಥ ಮಂಗೇಶ್ಕರ್ ಅವರ ಗಾಯನ ಶೈಲಿಯ ಪ್ರಭಾವ ನಿಮ್ಮ ಮೇಲೆ ಯಾವ ಬಗೆಯದು?**

ಅದನ್ನು ವಿವರಿಸುವ ಮುನ್ನ ನನ್ನ ಸಂಗೀತ ಕ್ಷೇತ್ರದ ಪಯಣದ ಕುರಿತು ಚಿಕ್ಕದಾಗಿ ಹೇಳುತ್ತೇನೆ. ಅಪ್ಪ ಪಂಡಿತ್ ಮೋಹನ್ ಬಳುವಳ್ಳಿ ಅವರು ತಬಲಾ ಕಲಾವಿದರಾದ್ದರಿಂದ, ಸಂಗೀತದ ಹಿನ್ನೆಲೆ ಅನಾಯಾಸವಾಗಿ ದೊರೆಯಿತು. ಅಮ್ಮ ಜ್ಯೋತಿ ಎಂ. ಬಳುವಳ್ಳಿ ಕೂಡ ಗಾಯಕಿಯೇ ಆಗಿದ್ದರು. ಆದರೆ, ನಾನು ಹಾಡುತ್ತಿದ್ದಾಗ ಸಂಗೀತ ಕ್ಷೇತ್ರದ ಅನೇಕರು, 'ನೀನು ದೀನನಾಥ ಮಂಗೇಶ್ಕರ್ ಅವರಂತೆಯೇ ಹಾಡುತ್ತಿ' ಎಂದು ಹೇಳುತ್ತಿದ್ದರು. ಪ್ರಾಥಮಿಕ ಹಂತದ ಸಂಗೀತಾಭ್ಯಾಸದ ಸಂದರ್ಭದಲ್ಲಿ ಹಾರ್ಮೋನಿಯಂ ವಾದನ ತುಂಬಾ ಇಷ್ಟವೆನಿಸಿತು. ಗುರುಗಳಾದ ಪಂಡಿತ್ ತುಳಸೀದಾಸ್ ಬೋರ್ಕರ್ ಅವರು ಹಾರ್ಮೋನಿಯಂ ಮತ್ತು ಸಂಗೀತ ಶಿಕ್ಷಣವನ್ನು ನೀಡುವಾಗ ಪಂಡಿತ್ ದೀನನಾಥ ಮಂಗೇಶ್ಕರ್ ಅವರ ಗಾಯಕಿಯನ್ನು ಅನಾಯಾಸವಾಗಿ ಕಲಿತೆನಂತೆ. ದೀನನಾಥ್ ಮಂಗೇಶ್ಕರ್ ಅವರ ಬಗ್ಗೆ ನನಗೇನೂ ಗೊತ್ತಿರಲಿಲ್ಲ. ರಾತ್ರಿ ಹಗಲೆನ್ನದೆ ನಾನೂ ನನ್ನ ಗುರುಗಳೂ ದೀನನಾಥ್ ಮಂಗೇಶ್ಕರ್ ಅವರ ಗಾಯನ ಶೈಲಿಯ ಇಂಚಿಂಚನ್ನೂ ಅಭ್ಯಾಸ ಮಾಡಲಾರಂಭಿಸಿದೆವು. ಅವರು ನನ್ನ ಶ್ರಮಕ್ಕೆ ಆಸರೆಯಾಗಿ, ಮಾರ್ಗದರ್ಶಕರಾಗಿ ನಿಂತಿದ್ದರು.

ಗುರುಗಳಂತೆಯೇ ಇತರರೂ ಹೀಗೆ ಹೇಳುವುದನ್ನು ಕೇಳಿದ ನನಗೆ ಅವರ ಮಗಳಾದ ಲತಾ ಮಂಗೇಶ್ಕರ್ ಅವರನ್ನು ಭೇಟಿಯಾಗಿ ಅವರ ಮುಂದೆ ಹಾಡಬೇಕು ಎಂದು ಅನಿಸಿತು. ಎಂಟನೇ ತರಗತಿಯಲ್ಲಿದ್ದಾಗ ನಾನು ಅವರನ್ನು ಭೇಟಿಯಾಗಬೇಕು ಎಂದು ಮನೆಯಲ್ಲಿ ಹಟ ಹಿಡಿದೆ. ನಾವೂ ಮುಂಬೈಯಲ್ಲಿಯೇ ಇದ್ದುದರಿಂದ ಭೇಟಿಯೇನೂ ದುಸ್ಸಾಧ್ಯವಾಗಿರಲಿಲ್ಲ. ಆದರೆ ಈ ಸಣ್ಣ ಹುಡುಗನ ಮಾತನ್ನು ಮನೆಯ ಹಿರಿಯರು ಗಂಭೀರವಾಗಿ ತೆಗೆದುಕೊಳ್ಳಲೇ ಇಲ್ಲ. ಒಂದುದಿನ ಬೆಳಿಗ್ಗೆ ಲೋಕಲ್ ರೈಲು ಹಿಡಿದು ಲತಾ ಮಂಗೇಶ್ಕರ್ ಅವರ ಮನೆಗೆ ಹೋದೆ. ಅವರ ಮನೆಯೊಳಗೆ ಹೋಗುವುದು ಸುಲಭವಾಗಿರಲಿಲ್ಲ. 'ಜಗಳಗಂಟ ಹುಡುಗನೊಬ್ಬ ಬಂದಿದ್ದಾನೆ' ಎಂದು ಲತಾ ದೀದಿಗೆ ಯಾರೋ ಹೇಳಿದಾಗ, ಅವರು ನನ್ನನ್ನು ಒಳಗೆ ಕರೆದರು. ಡುಮ್ ಡುಮ್ಮಕ್ಕೆ ಇದ್ದ ನನ್ನ ಮುಖನೋಡಿ ದೀದಿಗೆ ಏನನಿಸಿತೋ ಏನೋ, ಅವರು ನನ್ನ ಮಾತುಗಳನ್ನು ಆಲಿಸಿದರು. ಅವರ ಮುಂದೆ ಹಾಡುವುದಕ್ಕೆ ಅವಕಾಶ ಮಾಡಿಕೊಟ್ಟರು. ನನ್ನ ಧ್ವನಿಯನ್ನು ಕೇಳಿ ಅವರಿಗೂ ಸಂತೋಷವಾಯಿತು. ನಂತರ ಅವರ ಮನೆಗೆ ಆಗಾಗ ಭೇಟಿ ನೀಡುವ ಅವಕಾಶ ದೊರೆಯಿತು.

ದೀನನಾಥ ಮಂಗೇಶ್ಕರ್ ಘರಾಣೆಯು ಅಳಿವಿನಂಚಿನಲ್ಲಿ ಇತ್ತಂತೆ. ನಾನೂ ಅವರಂತೆಯೇ ಹಾಡುತ್ತೇನೆ ಎಂದು ನನಗೆ ಗೊತ್ತಾಗಿದ್ದು ಹಾಡಲಿಕ್ಕೆ ಶುರು ಮಾಡಿದ ಬಹಳ ದಿನಗಳ ನಂತರ.

ಸಂದರ್ಶನ

**◆ ಸ್ಪಷ್ಟವಾದ ಸಾಹಿತ್ಯಕ್ಕೆ ನೀವು ಒತ್ತು ಕೊಡುತ್ತೀರಿ. ಸಂಗೀತ ಕ್ಷೇತ್ರದಲ್ಲಿ ಇದು ಸ್ವಲ್ಪ ಅಪರೂಪ ಅಲ್ಲವೇ?**

ಸಂಗೀತವೆಂದರೆ ಏಕಮುಖಿ ಸಂವಹನವಲ್ಲ. ಕೇಳುಗರೂ ತಲ್ಲೀನರಾದಾಗ ಮಾತ್ರ ಕಛೇರಿ ಯಶಸ್ವಿಯಾಗುತ್ತದೆ. ಹಾಗಿದ್ದ ಮೇಲೆ ಸಂಗೀತದಲ್ಲಿ ಸಾಹಿತ್ಯಕ್ಕೆ ಹೆಚ್ಚಿನ ಪ್ರಾಧ್ಯಾನ್ಯ ಕೊಡುವುದು ಅಗತ್ಯವೇ ಆಗಿದೆ. ಭಾವವೂ ಕೇಳುಗರನ್ನು ತಟ್ಟಬೇಕು, ವಿಚಾರವೂ ಪೂರಕವಾಗಿ ಇರಬೇಕು. ಹಾಡುವಾಗ ಕೆಲವೊಮ್ಮೆ ಇದು ಬಹಳ ಸವಾಲಿನ ಕೆಲಸವಾಗಿಬಿಡುತ್ತದೆ. ಆದರೆ ನಾನು, ನನ್ನ ಮನಸ್ಸಿಗೆ ಯಾವುದು ಚೆನ್ನಾಗಿದೆ ಎಂದು ಅನಿಸುತ್ತದೋ ಅಂತಹ ಕೆಲಸಗಳನ್ನಷ್ಟೇ ಮಾಡುತ್ತಿದ್ದೇನೆ. ಜನರಿಗೆ ಈ ಹಾಡು ಇಷ್ಟವಾಗಿದೆಯೆಂದು ಅದನ್ನೇ ಪದೇ ಪದೇ ಹಾಡುವುದಿಲ್ಲ. ಅಂತರಂಗವು ಏನು ಹೇಳುತ್ತದೋ, ಅದನ್ನು ಕೇಳಿಸಿಕೊಳ್ಳಲು ಸದಾ